ಅಂತ ಮೊಮ್ಮಗನನ್ನು ನೈಸ್ ಮಾಡಲು ನೋಡಿದಳು.

'ಇಬ್ಬರೂ ಮಾಮಂದಿರು ಯಾಕೆ ಒಟ್ಟಿಗೇ ಇರೂದಿಲ್ಲ?' ಕುತೂಹಲದಿಂದ ಧರ್ಮ ಕೇಳಿದ.

'ಅಯ್ಯೋ ಅದೇನು ಕೇಳ್ತೀ, ಒಬ್ಬರನ್ನು ಕಂಡರೆ ಒಬ್ಬರಿಗಾಗದು, ಚಿಕ್ಕಂದಿನಿಂದ ಹಾಗೇ ಬರೀ ಜಗಳ' ಅನ್ನುತ್ತಾ ಅಜ್ಜಿ ನಿಟ್ಟುಸಿರಿಟ್ಟಳು. 'ಏನೂ ಆಗೂದಿಲ್ಲ, ನಾನಿದ್ದೇನಲ್ಲ ಈ ಸಲ, ನನ್ನ ಮುಂದೆ ಅವರು ಜಗಳ ಆಡಲಿಕ್ಕಿಲ್ಲ' ಅಂತ ವರಾತ ಹಚ್ಚಿದ ಧರ್ಮ. 'ಅವರಿಬ್ಬರೂ ಹೆದರುವುದು ಆ ಟೇಲರ್ ಬಾನಣ್ಣನಿಗೆ ಮಾತ್ರ, ಅವರಿಬ್ಬರೂ ಬಂದು ಜಗಳಕ್ಕೆ ನಿಂತರೆ ಬಾನಣ್ಣ ಅವರಿಗೆ ಈಗಲೂ ಅದೇ ಬಣ್ಣ ಬಣ್ಣದ ಬಟ್ಟೆ ತೋರಿಸಿ ಹೆದರಿಸಿ ಓಡಿಸಿ ಬಿಡ್ತಾನೆ' ಅಂತ ಅಜ್ಜಿ ತಮಾಷೆ ಮಾಡುತ್ತಾ ನಕ್ಕಳು.

'ಅವರಿಬ್ಬರೂ ಬಾನಣ್ಣನ ಬಣ್ಣದ ಬಟ್ಟೆಗೆ ಯಾಕೆ ಹೆದರ್ತಾರೆ ಅಜ್ಜೀ?'

'ಅದೊಂದು ಸಣ್ಣ ಕಥೆಯಿದೆ, ಇನ್ನೊಂದು ದಿನ ಹೇಳುವೆ' ಅಂದಳು ಅಜ್ಜಿ. ಧರ್ಮನಿಗೆ ಕುತೂಹಲ ಉಕ್ಕಿ 'ಈಗಲೇ ಹೇಳಜ್ಜೀ' ಅನ್ನುತ್ತ ಕೈಲಿದ್ದ ಬ್ಯಾಟನ್ನು ಅಲ್ಲಿಯೇ ಬಿಟ್ಟು ಅಜ್ಜಿಯ ಬಳಿ ಬಂದು ಕೂತೇ ಬಿಟ್ಟ. ಮೊಮ್ಮಗ ರಚ್ಚೆ ಹಿಡಿದನೆಂದರೆ ಬಿಡುವ ಮಾತೇ ಇಲ್ಲ ಅಂತ ಅವಳಿಗೆ ಗೊತ್ತಿತ್ತು.

ದೀಪಾವಳಿ ಹಬ್ಬಕ್ಕೆ ಹೊಸ ಬಟ್ಟೆ ಹೊಲಿಸುವ ವಿಷಯಕ್ಕೆ ಉಂಟಾದ ಜಗಳ ಅದು. ಯಾವಾಗಲೂ ಇಬ್ಬರಿಗೂ ಒಂದೇ ಬಣ್ಣದ ಬಟ್ಟೆ ತರುತ್ತಿದ್ದ ನಿನ್ನ ತಾತ ಆ ಸಲ ಕೆಂಪು ಮತ್ತು ಹಸಿರು ಬಟ್ಟೆ ತಂದು ಬಿಟ್ಟಿದ್ದರು. ನಾನು ನಮ್ಮೂರಿನ ಬಾನಣ್ಣನ ಹತ್ತಿರ ಅಂಗಿ ಹೊಲಿಸಲು ಅಳತೆ ಕೊಡಲೆಂದು ಇವರಿಬ್ಬರನ್ನೂ ಕರೆದುಕೊಂಡು ಹೋದೆ. ಬಾನಣ್ಣ ತುಂಬ ಅಕ್ಕರೆಯಿಂದ ಸರಿಯಾದ ಅಳತೆ ತೆಗೆದುಕೊಂಡು, ಯಾರಿಗೆ ಯಾವ ಬಣ್ಣದ್ದು ಇರಲಿ? ಅಂತ ಸಹಜ ಕೇಳಿದ. ನಾನು ಯಾವ ಬಣ್ಣ ಯಾರಿಗೆ ಬೇಕೋ? ಅಂತ ಇವರನ್ನು ಕೇಳಿದ್ದೇ ತಪ್ಪಾಗಿ ಹೋಯ್ತು.

ಆಗ ನಿನ್ನ ವರುಣಮಾಮ ನನಗೆ ಹಸಿರು ಬಣ್ಣದ್ದೇ ಬೇಕು ಬಾನಣ್ಣ ಅಂತ ಹಟ ಹಿಡಿದ. ಅದನ್ನು ಕೇಳಿದ ಸೂರ್ಯ, ನನಗಂತೂ ಆ ಕೆಂಪು ಬಣ್ಣದ್ದು ಬೇಕಾಗಿಲ್ಲ ಅಂತ ನಿಂತೇ ಬಿಟ್ಟ. ನಾನು ಸೂರ್ಯನನ್ನು ಸಮಾಧಾನ ಮಾಡುತ್ತಾ, ನೀನು ಅವನಿಗಿಂತ ದೊಡ್ಡವ, ನೀನೇ ಅನುಸರಿಸಿಕೊಂಡು ಹೋಗು ಅಂತ ಬುದ್ಧಿ ಹೇಳಲು ನೋಡಿದೆ. ಅಯ್ಯೋ ಎಲ್ಲಿತ್ತೋ ಕೋಪ ಸೂರಿಮಾಮನ ನೆತ್ತಿಗೇರಿತ್ತು, ನನಗೆ ಹಸಿರು ಅಂಗಿಯನ್ನೇ ಹೊಲಿ ಬಾನಣ್ಣ, ಇಲ್ಲದಿದ್ದರೆ ನನಗೆ ಯಾವ ಅಂಗಿಯೂ ಬೇಡ ಅನ್ನುತ್ತಾ ಕೆಂಡಾಮಂಡಲನಾದ.

ನಾನು ಅವನ ಸಿಟ್ಟನ್ನು ತಹಬಂದಿಗೆ ತರಲು ನೋಡಿದೆ. 'ನೀನು ಯಾವಾಗಲೂ ನಿನ್ನ ಚಿಕ್ಕ ಮಗನ ಬದಿಗೇ' ಅಂತ ಕೊಂಕು ನುಡಿದ. ಹೌದು ನೋಡು, ನಾನೆಂದರೆ ಬಹಳ ನೆಚ್ಚು ಅಮ್ಮಂಗೆ, ನಿನಗೇನು ಕಷ್ಟ? ಅಂತ ವರುಣನೂ ಜಗಳಕ್ಕೆ ನಿಂತುಬಿಟ್ಟ. ನಾನು, ಹೋಗಲಿ ಬಿಡು ಸೂರಿ, ಅವನಿನ್ನೂ ಸಣ್ಣವ ಅನ್ನುತ್ತಲೇ ಇದ್ದೆ. ಸೂರಿ ತಮ್ಮನ ಮುಖಮೂತಿ ನೋಡದೇ ರಪ್ಪನೆ ಒಂದು ಏಟು ಕೊಟ್ಟೇ ಬಿಟ್ಟ. ಅಲ್ಲೇ ಬಾನಣ್ಣನ ಮನೆ ಅಂಗಳದಲ್ಲೇ ಇಬ್ಬರೂ ಅಂಗಿ ಹರಿದುಕೊಂಡು ಕುಸ್ತಿಗೆ ಬಿದ್ದರು. ಅವರನ್ನು ಸುಮ್ಮನಾಗಿಸಿ ಮನೆಗೆ ಕರೆತರುವುದಕ್ಕೆ ನನಗೆ ಸಾಕುಸಾಕಾಯ್ತು. ವಿಷಯ ತಿಳಿದದ್ದೇ ಇಬ್ಬರೂ ನಿನ್ನ ತಾತನ ಹತ್ತಿರ ದೊಣ್ಣೆಯಲ್ಲಿ ಸರೀ ಹೊಡೆತ ತಿಂದರು'.

'ಅಯ್ಯೋ ಪಾಪ. ಆಮೇಲೆ ಟೇಲರ್ ಬಾನಣ್ಣ ಏನು ಮಾಡಿದ ಅಜ್ಜೀ?' ಅಂತ ಕುತೂಹಲದಿಂದಲೇ ಕೇಳಿದ ಧರ್ಮ. ಟೇಲರ್ ಬಾನಣ್ಣನಿಗೂ ಒಮ್ಮೆಲೇ ಏನು ಮಾಡಬೇಕೆಂದು ತೋಚಲಿಲ್ಲ. ತಾತ ಸಿಕ್ಕಾಗ, 'ನೀವು ಪ್ರತೀ ವರ್ಷದಂತೆ ಈ ವರ್ಷವೂ ಒಂದೇ ಬಣ್ಣದ ಬಟ್ಟೆ ತರಬೇಡವೆ? ಏನಾದರೂ ಉಪಾಯ ಮಾಡ್ತೇನೆ, ಚಿಂತೆ ಬಿಡಿ' ಅಂತ ಅಂದನಂತೆ. ಜಗಳ ತೀರಿಸುವಲ್ಲಿ ಬಾನಣ್ಣ ನಿಸ್ಸೀಮ. ನಂತರ ತನ್ನ ಬಳಿ ಹೊಲಿಯಲು ಬಂದ ಬಟ್ಟೆಯ ಉಳಿದ ಬಣ್ಣ ಬಣ್ಣದ ತುಂಡುಗಳನ್ನು ಅದಕ್ಕೆ ಜೋಡಿಸಿ ಉದ್ದ ಸೀರೆಯಂತೆ ಹೊಲಿದು, ನಂತರ ಅದನ್ನು ಕತ್ತರಿಸಿ ಅವರಿಬ್ಬರಿಗೂ ಎರಡು ಅಂಗಿಗಳನ್ನು ಹೊಲಿದುಕೊಟ್ಟಿದ್ದ.

ಕೆಂಪೂ ಅಲ್ಲ ಹಸಿರೂ ಅಲ್ಲದ ಕಿತ್ತಳೆ, ಹಳದಿ, ದಟ್ಟನೀಲಿ, ನೇರಳೆ, ತಿಳಿನೀಲಿ ಬಣ್ಣಗಳ ಪಟ್ಟಿಗಳಿರುವ ಎರಡು ಅಂಗಿಗಳನ್ನು ಇಬ್ಬರೂ ಬಾಯಿ ಮುಚ್ಚಿಕೊಂಡು ಆ ದೀಪಾವಳಿಗೆ ಧರಿಸಿದ್ದರು. ನಂತರ ಶಾಲೆಗೂ ಹಾಕಿಕೊಂಡು ಹೋದರು. ಆಗ ಮಾತ್ರ ಗೆಳೆಯರು ತಮಾಷೆ